ಖಾಸಗಿ ಮತ್ತು ಸರ್ಕಾರಿ ಬಸ್ಸುಗಳ ಓಡಾಟ ನಿಂತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ರಸ್ತೆಯ ದುರಸ್ತಿಗಾಗಿ ಸರ್ಕಾರ ಕ್ರಮ ತೆಗೆದುಕೊಂಡಿದೆಯೇ?

ಇ) ಈ ಕೆಲಸ ಪೂರೈಸಲು ಎಷ್ಟು ಕಾಲಾವಕಾಶ ಬೇಕಾಗುವುದು?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):

ಅ) 1) ಸಪ್ರಸ್ತಾವಿತ ರಸ್ತೆ ಮಣ್ಣೆ - ಮರಾಠಿಪಾಳ್ಯ (ಶಿವಾಜಿಪಾಳ್ಯ) ರಸ್ತೆಯು ಲೋಕೋಪಯೋಗಿ ಇಲಾಖೆಯ ನಿರ್ವಹಣೆಯಲ್ಲಿದ್ದು ಸಂಚಾರ ಯೋಗ್ಯವಾಗಿದೆ.

2) ನಿಡವಂದ - ಎಲೇಕ್ಯಾತನಹಳ್ಳಿ ರಸ್ತೆ ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿದ್ದು ಲಭ್ಯವಿರುವ ಅನುದಾನ ಮಿತಿಯಲ್ಲಿ ಜಲ್ಲಿ ಮೇಲ್ಪೈಯನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಲಾಗದ ಕಾರಣ ಕೆಲವು ಬಸ್‌ಗಳು ಸಂಚಾರ ಕಡಿಮೆಯಾಗಿರುವ ಬಗ್ಗೆ ಸಾರ್ವಜನಿಕರಿಂದ ದೂರು ಇರುತ್ತದೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಆ) 1) ಲೋಕೋಪಯೋಗಿ ಇಲಾಖೆ ವ್ಯಾಪ್ತಿಯ ಮಣ್ಣೆ-ಶಿವಾಜಿಪಾಳ್ಯ ರಸ್ತೆಯಲ್ಲಿ 1993-94ನೇ ಸಾಲಿನಲ್ಲಿ 1 ಕಿ.ಮೀ. ಡಾಂಬರು ಹಾಗೂ 3 ಕಿ.ಮೀ. ಮರು ಜಲ್ಲಿ ಹಾಸಲಾಗಿದೆ. ಹಾಗೂ 1994-95ನೇ ಸಾಲಿನಲ್ಲಿ 2:45 ಕಿ.ಮೀ. ಡಾಂಬರು ಹಾಗೂ 1 ಕಿ.ಮೀ. ಮರು ಜಲ್ಲಿ ಹಾಸುವ ಕಾಮಗಾರಿ ಪ್ರಗತಿಯಲ್ಲಿದೆ.

2) ನಿಡವಂದ - ಎಲೆಕ್ಯಾತನಹಳ್ಳಿ ರಸ್ತೆಯಲ್ಲಿ 94-95ರ ಸಾಲಿನಲ್ಲಿ ರಸ್ತೆ ಅಗಲಪಡಿಸಿ, ಮಳೆ ನೀರು ಸರಾಗ ಹರಿದು ಹೋಗಲು ಚರಂಡಿಗಳನ್ನು 1 ಕಿ.ಮೀ. ಮರುಜಲ್ಲಿ ಮಾಡಿ ಡಾಂಬರು ಮಾಡುವ ಕೆಲಸಗಳು ಪ್ರಗತಿಯಲ್ಲಿದೆ. ಹಾಗೂ 1.30 ಕಿ.ಮೀ. ಡಾಂಬರು ಹಾಗೂ 2.65 ಕಿ.ಮೀ. ಮರು ಜಲ್ಲಿ ಮಾಡುವ ಕಾರ್ಯಕ್ರಮವಿರುತ್ತದೆ.

ಇ) ಹಾಲಿ ಪ್ರಗತಿಯಲ್ಲಿರುವ ಕೆಲಸಗಳನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಕೊರಟಗೆರೆ ತಾಲ್ಲೂಕಿನಲ್ಲಿ ಜಂಪೇನಹಳ್ಳಿ ಕೆರೆ ಪುನರಾರಂಭಿಸುವುದು.

168-ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕೊರಟಗೆರೆ ತಾಲ್ಲೂಕು ಜಂಪೇನಹಳ್ಳಿ ಕೆರೆ ನಿರ್ಮಾಣ ತ್ವರಿತವಾಗಿ ತೆಗೆದುಕೊಳ್ಳುವಂತೆ ಸಣ್ಣ ನೀರಾವರಿ ಸಚಿವರು ಕಳೆದ ವಿಧಾನ ಸಭೆಯ ಅಧಿವೇಶನದಲ್ಲಿ ಆಶ್ವಾಸನೆ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ಈ ಕಾಮಗಾರಿ ಕಾರ್ಯಗತ ಮಾಡಲು ಸರ್ಕಾರ ಕ್ರಮ ತೆಗೆದುಕೊಳ್ಳುವುದೇ? ಹಾಗಿದ್ದಲ್ಲಿ ಎಂದು?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಹೌದು.

ಆ) ಈ ಕಾಮಗಾರಿಯನ್ನು ಕಾರ್ಯಗಳ ಮಾಡಲು ಸರ್ಕಾರ ಈಗಾಗಲೇ ಕ್ರಮ ಕೈಗೊಂಡಿದ್ದು ಕೋಡಿ ಕೆಲಸ ಪ್ರಗತಿಯಲ್ಲಿದೆ.

ದ. ಕನ್ನಡ ಜಿಲ್ಲೆಯ ಬ್ರಹ್ಮಾವರದಲ್ಲಿ ಟ್ರಕ್ ಪಾರ್ಕಿಂಗ್ ಸೌಲಭ್ಯ

199-ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?